2017 ಕ.ತೀ.ವ. 1789

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಯಂತ್ ಪಟೇಲ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಬಿ.ವಿ. ನಾಗರತ್ನ

## ಭಾರತ ಸರ್ಕಾರ (ಕೇಂದ್ರಿಯ ರೇಷ್ಮೆ ಮಂಡಳ) ಮತ್ತು ಇತರರು –ವಿರುದ್ಧ– ಶ್ರೀಮತಿ ಗಾಯತ್ರಿ ಅನಂತ್ ಮತ್ತು ಇತರರು*

ಭಾರತ ಸಂವಿಧಾನದ 226 ಹಾಗೂ 227ರ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ನಿಯೋಜಕನು ತನ್ನ ನೌಕರರಿಗೆ ನೀಡಿದ ಹೆಚ್ಚಿನ ಸಂದಾಯವನ್ನು ವಸೂಲಿ ಮಾಡಲು ತೆಗೆದುಕೊಂಡ ಕ್ರಮವನ್ನು ನೌಕರರಿಂದ ವಿರೋಧಿಸಲಾಯಿತು. ಕೇಂದ್ರ ಆಡಳಿತಾತ್ಮಕ ನ್ಯಾಯಾಧಿಕರಣವು ಸಹಾ ವಸೂಲಾತಿಯು ಕಾನೂನಿನಲ್ಲಿ ಅನುಮತೀಯವಲ್ಲವೆಂದು ನಿರ್ಣಯಿಸಿತು. ಅದನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ ಸಲ್ಲಿಸಲಾಗಿದೆ.

ಪ್ರಸ್ತುತ ಮೊಕದ್ದಮೆಯನ್ನು ಮೇಲಿನ ಕಾನೂನು ಸ್ಥಾನವನ್ನು ಆಧರಿಸಿ ಪರಿಗಣಿಸುವ ಸಂಗತಿ ಸನ್ನಿವೇಶಗಳು ಇದ್ದರೆ ಮತ್ತು ನಿರ್ದಿಷ್ಟವಾಗಿ, *ರಫೀಕ್ ಮಾಶಿ* ಮೊಕದ್ದಮೆಯಲ್ಲಿ ನಂತರ ನಿರ್ಣಯದಲ್ಲಿ ಅಪೆಕ್ಸ್ ನ್ಯಾಯಾಲಯ 18ನೇ ಪ್ಯಾರಾಗ್ರಾಫ್‌ನಲ್ಲಿ ಮಾಡಿದ ಅಭಿಪ್ರಾಯೋಕ್ತಿಗಳನ್ನು ಇದರಲ್ಲಿ ಮತ್ತೆ ಯಥಾವತ್ತಾಗಿ ನಿರೂಪಿಸಲಾಗಿದೆ, ನಮಗೆ ಪ್ರಸ್ತುತ ಮೊಕದ್ದಮೆಯಲ್ಲಿನ ಸನ್ನಿವೇಶಗಳು (i)ನೇ ಮತ್ತು (iii)ನೇ ಖಂಡ (v)ನೇ ಖಂಡದ ಜೊತೆಯಲ್ಲಿ ಮೇಲಿನ ನಿರ್ಣಯವು ಒಳಗೊಳ್ಳುತ್ತದೆ ಎಂಬುದು ಕಂಡುಬರುತ್ತದೆ. ನಾವು ಈಗಾಗಲೇ ದಾಖಲಿಸಿರುವಂತೆ ಪ್ರಸ್ತುತ ಮೊಕದ್ದಮೆಯ ಎಲ್ಲಾ ನೌಕರರು (iii)ನೇ ವರ್ಗದ ಸೇವೆಗೆ ಸೇರಿರುತ್ತಾರೆ. ಆದುದರಿಂದ ಉನ್ನತ ದರ್ಜೆಯಲ್ಲಿರುವ ಇಬ್ಬರು ವ್ಯಕ್ತಿಗಳು ಈಗಾಗಲೇ ನಿವೃತ್ತಿ

* ರಿಟ್ ಅರ್ಜಿ ಸಂಖ್ಯೆ: 3402/2016 (ಎಸ್–ಸಿಎಟಿ), ದಿನಾಂಕ: 2ನೇ ಮಾರ್ಚ್, 2016.

ಹೊಂದಿರುವುದರಿಂದ, ಅವರನ್ನು ಹೊರತುಪಡಿಸಿ ಎಲ್ಲಾ ನೌಕರರು (iii) ಮತ್ತು (iv)ನೇ ಖಂಡಕ್ಕೆ ಒಳಪಡುತ್ತಾರೆ. ಆದುದರಿಂದ 18ನೇ ಪ್ಯಾರಾಗ್ರಾಫ್‌ನಲ್ಲಿ ನಿರ್ಣಯದಲ್ಲಿ ಅಗತ್ಯಪಡಿಸಿದ ಮೇಲಿನ (ii)ನೇ ಖಂಡದಡಿಯಲ್ಲಿ ಎಲ್ಲಾ ನೌಕರರು ಒಳಗೊಳ್ಳುವರು.

ನ್ಯಾಯಾಧಿಕರಣದಿಂದ ಹೊರಡಿಸಲಾದ ಆದೇಶದಿಂದ ಉದ್ಭವಿಸಿದ ಭಾರತ ಸಂವಿಧಾನದ 227ನೇ ಅನುಚ್ಛೇದ ಅಡಿಯಲ್ಲಿ ಈ ನ್ಯಾಯಾಲಯ ನ್ಯಾಯಿಕ ಪರಿಶೀಲನೆಯ ಪರಿಮಿತ ಅಧಿಕಾರ ವ್ಯಾಪ್ತಿಯ ಆದೇಶವನ್ನು ಹೊರಡಿಸಿರುವುದರಿಂದ ಇಲ್ಲಿ ಕಠಿಣವಾಗಿ ಹೇಳಲೇಬೇಕಾಗಿದೆ. ದಾಖಲೆ ಮೇಲೆ ತಪ್ಪುಗಳು ಕಂಡುಬಂದರೆ ಅಥವಾ ಗಂಭೀರವಾದ ಅನ್ಯಾಯವು ಕಂಡು ಬಂದರೆ ಅಥವಾ ಶಾಸನಾತ್ಮಕ ಉಪಬಂಧವು ಉಲ್ಲಂಘನೆಯಾಗಿರುವುದು ಕಂಡು ಬಂದರೆ ಮಾತ್ರವೇ ಸಂವಿಧಾನದ 227ನೇ ಅನುಚ್ಛೇದದ ಅಡಿಯಲ್ಲಿನ ಅಧಿಕಾರ ವ್ಯಾಪ್ತಿಯೊಳಗೆ ಹಸ್ತಕ್ಷೇಪವನ್ನು ಚಲಾಯಿಸುವುದಕ್ಕಾಗಿ ಈ ನ್ಯಾಯಾಲಯ ಕೇಳಬಹುದು. ನ್ಯಾಯಾಧಿಕರಣವು ವಸೂಲಾತಿಗೆ ಅವಕಾಶವಿಲ್ಲವೆಂದು ನಿರ್ಣಯಿಸಿರುವುದರಿಂದ ಮತ್ತು ನನ್ನ ದೃಷ್ಟಿಯಲ್ಲಿ ಮೇಲಿನ ಕಾನೂನು ಸ್ಥಾನದಲ್ಲಿ ಅದನ್ನು ಪರಿಗಣಿಸಿರುವಾಗ ಅಂಥ ನಿರ್ಣಯವು ತಪ್ಪಾಗಿರುವುದಿಲ್ಲ. ಸಂವಿಧಾನದ 227ನೇ ಅನುಬಂಧದ ಅಡಿಯಲ್ಲಿ ಮೊಕದ್ದಮೆಯಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಾಗುವುದಿಲ್ಲ ಎಂದು ಅಭಿಪ್ರಾಯಪಟ್ಟು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

*1. (2012) 8 ಎಸ್‌ಎಸ್‌ಸಿ 417*
*ಚಾಂದಿ ಪ್ರಸಾದ್ ಯೂನಿಯಾಳ್ ಮತ್ತು ಇತರರು*
*–ವಿರುದ್ಧ– ಉತ್ತರಖಂಡ ಸರ್ಕಾರ ಮತ್ತು ಇತರರು (ಉಲ್ಲೇ) 4*

2. *(2014) 8 ಎಸ್‌ಸಿಸಿ 883*
*ಪಂಜಾಬ್ ರಾಜ್ಯ ಮತ್ತು ಇತರರು –ವಿರುದ್ಧ–*
*ರಫೀಕ್ ಮಾಶಿ (ಸುಣ್ಣ ಬಳಿಯುವವ)* *(ಉಲ್ಲೇ) 5*

3. *(2015) 4 ಎಸ್‌ಸಿಸಿ 334*
*ಪಂಜಾಬ್ ರಾಜ್ಯ ಮತ್ತು ಇತರರು –ವಿರುದ್ಧ–*
*ರಫೀಕ್ ಮಾಶಿ (ಸುಣ್ಣ ಬಳಿಯುವವ)* *(ಉಲ್ಲೇ) 5*

ಅರ್ಜಿದಾರರ ಪರವಾಗಿ : ಶ್ರೀ ಎನ್.ಎಸ್. ಪ್ರಸಾದ್, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಜಯಂತ್ ಪಟೇಲ್:**

ಮೂಲ ಅರ್ಜಿಯನ್ನು ಪುರಸ್ಕರಿಸಿ ಕೇಂದ್ರ ಆಡಳಿತ ನ್ಯಾಯಾಧಿಕರಣವು (ಇನ್ನು ಮುಂದೆ ಇಲ್ಲಿ, ಸಂಕ್ಷಿಪ್ತವಾಗಿ 'ನ್ಯಾಯಾಧಿಕರಣ' ಎಂದು ಉಲ್ಲೇಖಿಸಲಾಗಿದೆ) ದಿನಾಂಕ 26.11.2012ರಂದು ಹೊರಡಿಸಿದ ಆದೇಶದ ವಿರುದ್ಧ ಪ್ರಸ್ತುತ ಅರ್ಜಿಯು ನಿರ್ದೇಶಿತವಾದುದಾಗಿದೆ.

2. ನ್ಯಾಯಾಧಿಕರಣದಿಂದ ಮೇಲೆ ಹೇಳಲಾದ ಆದೇಶವನ್ನು ಹೊರಡಿಸಿದ ನಂತರ, ಪುನರಾವಲೋಕಿಸುವ ಸಲುವಾಗಿ ಅರ್ಜಿದಾರರು ನ್ಯಾಯಾಧಿಕರಣದ ಮುಂದೆ ಸಂಖ್ಯೆ 15/2013ರಲ್ಲಿ ಪುನರವಲೋಕನಾ ಅರ್ಜಿಯನ್ನು ಸಲ್ಲಿಸಿರುತ್ತಾರೆ ಮತ್ತು ನ್ಯಾಯಾಧಿಕರಣವು ದಿನಾಂಕ 24.07.2015ರಂದು ಸಲ್ಲಿಸಿದ ಪುನರವಲೋಕನ ಅರ್ಜಿಯನ್ನು ವಜಾಗೊಳಿಸಿ ಆದೇಶವನ್ನು ಹೊರಡಿಸಿದೆ. ಇದನ್ನೆಲ್ಲವನ್ನು ಹೆಚ್ಚಿನ

ದಾಖಲೆಗಾಗಿ ಒದಗಿಸಲಾಗಿದೆ. ಹಾಗೆಯೇ ಈ ರಿಟ್ ಅರ್ಜಿಯಲ್ಲಿ ಅದನ್ನು ಟೀಕಿಸಲಾಗಿದೆ.

3. ನಾವು ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಶ್ರೀ ಎನ್.ಎಸ್. ಪ್ರಸಾದ್ ಇವರ ವಾದವನ್ನು ಆಲಿಸಿದ್ದೇವೆ.

4. ಇಲ್ಲಿಯ ಪ್ರತಿಯೊಂದು ಮೊಕದ್ದಮೆಯ ಉದ್ಯೋಗಿಗಳ ಅನುಮತಿ ಇಲ್ಲದೆ ಉದ್ಯೋಗದಾತನು ಮಾಡಿದ ಹೆಚ್ಚಿನ ಸಂದಾಯದ ವಸೂಲಾತಿಯ ವಿಷಯವಾಗಿರುವುದಿಲ್ಲವೆಂಬುದು ಅರ್ಜಿದಾರರು ಎತ್ತಿರುವ ವಾದವಾಗಿದೆ. ನ್ಯಾಯವಾದಿಗಳು, ಸಂಬಂಧಪಟ್ಟ ಸಾರ್ವಜನಿಕ ಹಣದ ವಿಷಯವಾಗಿ ಮತ್ತು ಪ್ರಾಮಾಣಿಕ ತಪ್ಪು ಗ್ರಹಿಕೆಯ ಕಾರಣದಿಂದ ಅಥವಾ ಯಾರೇ ವ್ಯಕ್ತಿ ಸಂದಾಯ ಮಾಡಿದ ಹಣದ ಭಾಗದ ಮೇಲೆ ಪ್ರಾಧಿಕಾರಿಯ ಹೊರತಾಗಿ ಹೆಚ್ಚಿನ ಸಂದಾಯ ಮಾಡಿದ್ದಾರೆ. ಇವುಗಳನ್ನು ಕಾರಣವಿಲ್ಲದೆ ಏಕೆ ವಸೂಲಾತಿ ಮಾಡಬಾರದು ಎಂದು ನಿವೇದಿಸಿರುವರು. ಅವರು ಸಂದಾಯ ಮಾಡಿದ ಹೆಚ್ಚಿನ ಮೊಬಲಗನ್ನು ವಸೂಲಿ ಮಾಡಲು ಅನುಮತಿಸುವುದಕ್ಕಾಗಿ ಸಂಬಂಧಪಟ್ಟ ನೌಕರನು ಮೋಸ ಅಥವಾ ತಪ್ಪು ನಿರೂಪಣೆಯಿಂದ ಮಾಡಿದ ಒಂದೇ ಮಾನದಂಡ ಆಗಿರುವುದಿಲ್ಲವೆಂದೂ ಸಹ ನಿರೂಪಿಸಿರುವರು. ಇದರ ಅವಲಂಬನೆಯಾಗಿ ವರದಿಯಾಗಿರುವ ***ಚಾಂದಿ ಪ್ರಸಾದ್ ಯೂನಿಯಾಳ್ ಮತ್ತು ಇತರರು –ವಿರುದ್ಧ– ಉತ್ತರಖಂಡ ಸರ್ಕಾರ ಮತ್ತು ಇತರರು [1] (ಚಾಂದಿ ಪ್ರಸಾದ್ ಯೂನಿಯಾಳ್)*** ಈ ಮೊಕದ್ದಮೆಯಲ್ಲಿ ಅಪೆಕ್ಸ್ ನ್ಯಾಯಾಲಯವು ನೀಡಿದ ತೀರ್ಪು ಮತ್ತು ಹೆಚ್ಚು ನಿರ್ದಿಷ್ಟವಾಗಿ, ಸದರಿ ತೀರ್ಪಿನ 14ನೇ ಪ್ಯಾರಾಗ್ರಾಫ್‌ನಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಈ ಮೊಕದ್ದಮೆಗೆ ತೀವ್ರತರವಾಗಿ ಅವಲಂಬಿತವಾಗುತ್ತದೆ ಎಂದು ನಿವೇದಿಸಿರುವರು. ಅವರು ಅಪೆಕ್ಸ್ ನ್ಯಾಯಾಲಯವು ನೀಡಿದ ನಿರ್ಣಯವನ್ನು ಉಲ್ಲಂಘಿಸಿ, ಅದರ ಮೇಲಿನ ಅಭಿಪ್ರಾಯೋಕ್ತಿಗಳ ಬೆಳಕಿನಡಿಯಲ್ಲಿ ಈ ವಸ್ತು

1. (2012) 8 ಎಸ್‌ಎಸ್‌ಸಿ 417

ವಿಷಯವನ್ನು ಪರಿಶೀಲಿಸಬೇಕೆಂದು ನ್ಯಾಯಾಧಿಕರಣಕ್ಕೂ ನಿವೇದಿಸಲಾಗಿತ್ತು. ನ್ಯಾಯಾಧಿಕರಣವು ವಿಷಯವನ್ನು ಯುಕ್ತವಾಗಿ ಪರಿಗಣಿಸದಿರುವುದು ನ್ಯೂನತೆಯಾಗಿ ಕಂಡು ಬಂದಿದೆ. ಆದುದರಿಂದ ಈ ನ್ಯಾಯಾಲಯವು ಈ ವಿಷಯದಲ್ಲಿ ಹಸ್ತಕ್ಷೇಪ ಮಾಡಬೇಕೆಂದು ಸಹ ನ್ಯಾಯವಾದಿಗಳು ನಿವೇದಿಸಿರುವರು.

5. ಮಾನ್ಯ ನ್ಯಾಯವಾದಿಗಳು ಅರ್ಜಿದಾರರ ಪರವಾಗಿ ಯುಕ್ತವಾಗಿ ***ಚಾಂದಿ ಪ್ರಸಾದ್ ಯೂನಿಯಾಳ್*** ಮೊಕದ್ದಮೆಯಲ್ಲಿ ಅಪೆಕ್ಸ್ ನ್ಯಾಯಾಲಯದ ಮೇಲೆ ಹೇಳಲಾದ ತೀರ್ಪನ್ನು ನಿವೇದಿಸಿದ ತರುವಾಯ, ಈ ವಿಷಯ ಮತ್ತು ವಿಸ್ತೃತ ಪೀಠ (ಅಪೆಕ್ಸ್ ನ್ಯಾಯಾಲಯದ ಸನ್ಮಾನ್ಯ ಮೂರು ನ್ಯಾಯಾಧೀಶರು) ಮುಂದೆ ಬಂದ ***ಪಂಜಾಬ್ ರಾಜ್ಯ ಮತ್ತು ಇತರರು – ವಿರುದ್ಧ – ರಫೀಕ್ ಮಾಶಿ (ಸುಣ್ಣ ಬಳಯುವವ)*** [2] ಮೊಕದ್ದಮೆಯಲ್ಲಿ ವಿಸ್ತೃತ ಪೀಠವು ***ಚಾಂದಿ ಪ್ರಸಾದ್ ಯೂನಿಯಾಳ್*** ಮೊಕದ್ದಮೆಯಲ್ಲಿ ಅಪೆಕ್ಸ್ ನ್ಯಾಯಾಲಯದ ತೀರ್ಪನ್ನು ಭಾರತದ ಸಂವಿಧಾನದ 136ನೇ ಅನುಚ್ಛೇದದ ಅಡಿಯಲ್ಲಿ ಮಾಡಿದ ಘೋಷಣೆಯಂತೆ ಪರಿಭಾಷಿಸಿದೆ ಮತ್ತು ಆ ತೀರ್ಪಿನಲ್ಲಿ ಭಾರತದ ಸಂವಿಧಾನದ 142ನೇ ಅನುಚ್ಛೇದದ ಅಡಿಯಲ್ಲಿ ಮಾಡಿದ ನಿರ್ಣಯವಾಗಿರುತ್ತದೆ. ಯಥಾರ್ಥವಾದ ಮೊಕದ್ದಮೆಯಲ್ಲಿ ಅದನ್ನು ನಿವೇದಿಸಿದ ತರುವಾಯ, ***ರಫೀಕ್ ಮಾಶಿ*** ಮೊಕದ್ದಮೆ ವಿಭಾಗೀಯ ಪೀಠದ ಮುಂದೆ ಮತ್ತೆ ಬಂದಾಗ ವಸ್ತು ವಿಷಯವನ್ನು ಅಪೆಕ್ಸ್ ನ್ಯಾಯಾಲಯದ ವಿಸ್ತೃತ ಪೀಠದ ನಿರ್ಣಯದಂತೆಯೇ ಮತ್ತೆ ಪರಿಗಣಿಸಿರುತ್ತವೆ ಮತ್ತು ಅದು ***ಪಂಜಾಬ್ ರಾಜ್ಯ ಮತ್ತು ಇತರರು –ವಿರುದ್ಧ– ರಫೀಕ್ ಮಾಶಿ (ಸುಣ್ಣ ಬಳಯುವವ)*** [3] ನಿರ್ಣಯವು ವರದಿಯಾಗಿರುತ್ತದೆ. ಮಾನ್ಯ ನ್ಯಾಯವಾದಿಗಳು ಅರ್ಜಿದಾರರ ಪರವಾಗಿ ***ಚಾಂದಿ ಪ್ರಸಾದ್ ಯೂನಿಯಾಳ್ (ಮೇಲಿನ)*** ಮೊಕದ್ದಮೆಯಲ್ಲಿ ಅಪೆಕ್ಸ್ ನ್ಯಾಯಾಲಯದ ವಿಸ್ತೃತ ಪೀಠವು (ಮೂರು ಸನ್ಮಾನ್ಯ ನ್ಯಾಯಮೂರ್ತಿ) ಭಾರತದ ಸಂವಿಧಾನದ 136ನೇ ಅನುಚ್ಛೇದದ ಅಡಿಯಲ್ಲಿ ಕಂಡು ಬರುವ ನಿರ್ಣಯದಂತೆಯೇ (ಎರಡನೇ ಮೊಕದ್ದಮೆಯಲ್ಲಿ) ***ರಫೀಕ್ ಮಾಶಿ*** ಮೊಕದ್ದಮೆಯಲ್ಲಿ ಎರಡು ಸನ್ಮಾನ್ಯ ನ್ಯಾಯಾಧೀಶರ ತರುವಾಯದ ನಿರ್ಣಯದಲ್ಲಿಯೂ ಅದರ ಪರಿಣಾಮವು

2. (2014) 8 ಎಸ್‌ಸಿಸಿ 883

3. (2015) 4 ಎಸ್‌ಸಿಸಿ 334

ದುರ್ಬಲಗೊಂಡಿರುವುದಿಲ್ಲ ಎಂದು ನಿವೇದಿಸಿರುವರು. ಆದುದರಿಂದ ಅವರು ***ಚಾಂದಿ ಪ್ರಸಾದ್ ಯೂನಿಯಾಳ್*** ಮೊಕದ್ದಮೆಯಲ್ಲಿ ಅಪೆಕ್ಸ್ ನ್ಯಾಯಾಲಯದ ನಿರ್ಣಯವು ಈ ಸದರಿ ವಸ್ತು ವಿಷಯದ ಮೊಕದ್ದಮೆಗೆ ಒಳಪಡುವುದರಿಂದ ಈ ನಿರ್ಣಯುವನ್ನು ಇಲ್ಲಿ ಪರಿಗಣಿಸಬಹುದೆಂದು ನಿವೇದಿಸಿರುವರು. ಅವರು, ***ಚಾಂದಿ ಪ್ರಸಾದ್ ಯೂನಿಯಾಳ್*** ಮೊಕದ್ದಮೆಯಲ್ಲಿ, ಅಪೆಕ್ಸ್ ನ್ಯಾಯಾಲಯದ ನಿರ್ಣಯದಲ್ಲಿ 14ನೇ ಪ್ಯಾರಾಗ್ರಾಫ್‌ನಲ್ಲಿ ಮಾಡಿದ ಅಭಿಪ್ರಾಯೋಕ್ತಿಗಳನ್ನು ಅನುಸರಿಸಲು ನ್ಯಾಯಾಧಿಕರಣಕ್ಕೆ ನಿವೇದಿಸಿರುವರು. ಆದರೆ ನ್ಯಾಯಾಧಿಕರಣವು ಕಾನೂನಿನ ದೃಷ್ಟಿಯಲ್ಲಿ ವಸೂಲಾತಿಯು ಊರ್ಜಿತವಾಗುವುದಿಲ್ಲವೆಂದು ಅರ್ಜಿಯನ್ನು ವಜಾ ಮಾಡಿರುತ್ತದೆ. ಆದುದರಿಂದ ಈ ನ್ಯಾಯಾಲಯವು ಹಸ್ತಕ್ಷೇಪ ಮಾಡಬೇಕೆಂದು ನಿವೇದಿಸಿರುವರು.

6. ಕಾನೂನಿನ ಅಂಶಗಳನ್ನು ಪರಿಗಣಿಸುವ ಮುಂಚೆ ನಾವು ಎರಡು ಅಂಶಗಳ ಮೇಲೆ ಹೆಚ್ಚಿನ ಒತ್ತು ನೀಡುವುದು ಅಗತ್ಯವಿದೆ. ನಿರ್ಣಯವನ್ನು ಮಾಡುವ ಪ್ರಕ್ರಿಯೆಯಲ್ಲಿ ಯಾವುದೇ ಪಾತ್ರ ವಹಿಸಿದ ಸಂಬಂಧಪಟ್ಟ ನೌಕರರ ವೇತನ ಶ್ರೇಣಿಯಿಂದಲೂ ಅರ್ಜಿದಾರರಾದ ವ್ಯವಸ್ಥಾಪಕ ಮಂಡಳಿಯವರು ಹೆಚ್ಚಿನ ವೇತನವನ್ನು ವಸೂಲಾತಿ ಮಾಡುವ ನಿರ್ಣಯವು ಇದರಲ್ಲಿನ ಒಂದು ಅಂಶವಾಗಿದೆ. ಈ ಅಂಶವನ್ನು ಕೇಂದ್ರ ಸರ್ಕಾರ ಅರ್ಜಿದಾರರಾದ ಆಡಳಿತ ಮಂಡಳಿಯ ನಿರ್ಣಯವನ್ನು ಮಂಜೂರಾತಿಗೊಳಿಸಿಲ್ಲದಿರುವುದು ಅಥವಾ ಅನುಮೋದಿಸಿಲ್ಲದಿರುವುದು ಸತ್ಯವಾಗಿದೆ. ಆದರೆ ಈ ಕಾರಣದಿಂದ ಈ ನಿರ್ಣಯದ ಪ್ರಯೋಜನವನ್ನು ಪಡೆದ ಯಾವುದೇ ವಂಚನೆ ಮತ್ತು ತಪ್ಪು ನಿರೂಪಣೆಯಲ್ಲಿ ಪಾತ್ರವಹಿಸಿರುವ ಸಂಬಂಧಪಟ್ಟ ನೌಕರರು ಮೊಕದ್ದಮೆಯಲ್ಲಿ ಇದನ್ನು ಮಾಡುವುದು ಸರಿಯಾದ ಕ್ರಮವಾಗಿರುವುದಿಲ್ಲ. ಎರಡನೇಯದಾಗಿ, ನ್ಯಾಯಾಧಿಕರಣದ ಮುಂದೆ ಅರ್ಜಿಯನ್ನು ದಾಖಲಿಸುವ ಸಂದರ್ಭದಲ್ಲಿ ಸಂಬಂಧಪಟ್ಟ ನೌಕರರಲ್ಲಿ ಶ್ರೀಮತಿ ಗಾಯತ್ರಿ ಮತ್ತು ಇನ್ನೊಬ್ಬರನ್ನು ಹೊರತುಪಡಿಸಿದ ಬಹುತೇಕ ನೌಕರರು ವರ್ಗ – IIIರ ಕೇಡರ್‌ಗೆ ಸೇರಿದವರಾಗಿರುತ್ತಾರೆ. ಮೇಲಿನ ಕೇಡರ್‌ಗೆ ಸೇರಿದವರು ಈ ಮೊಕದ್ದಮೆಯಲ್ಲಿ

ಈಗ ಅವರು ನಿವೃತ್ತಿಯಾಗಿರುವರು. ಸದರಿ ನೌಕರರಾದ ಮೇಲಿನ ಕೇಡರ್‌ನ ಶ್ರೀಮತಿ ಗಾಯತ್ರಿಯವರು ಮಾತ್ರವಲ್ಲದೆ, ಬಹುತೇಕ ನೌಕರರು ಈಗ ನಿವೃತ್ತಿ ಹೊಂದಿದ್ದಾರೆ ಅಥವಾ ನಿವೃತ್ತಿಯ ಅಂಚಿಗೆ ಬಂದಿರುತ್ತಾರೆ ಎಂಬ ಅಂಶವನ್ನು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ.

7. ಮೇಲೆ ಹೇಳಿದ ಸಂಗತಿಯ ಸನ್ನಿವೇಶದ ಬೆಳಕಿನಲ್ಲಿ, ಅರ್ಜಿದಾರರ ಪರವಾಗಿ ವಾದ ಮಂಡಿಸಿದ ಮಾನ್ಯ ನ್ಯಾಯವಾದಿಗಳ ವಾದಾಂಶವನ್ನು ಪರಿಶೀಲಿಸಬೇಕಾಗುವುದು ಅಗತ್ಯವಾಗಿದೆ. ***ಚಾಂದಿ ಪ್ರಸಾದ್ ಯೂನಿಯಾಳ್*** ಮೊಕದ್ದಮೆಯಲ್ಲಿ ಅಪೆಕ್ಸ್ ನ್ಯಾಯಾಲಯವು ಮಾಡಿದ ಅಭಿಪ್ರಾಯೋಕ್ತಿಗಳಂತೆ ಈ ಮೊಕದ್ದಮೆಯಲ್ಲಿ ಯಾವುದೇ ಪ್ರಾಧಿಕಾರಿಯ ಹೊರತು ಸಂದಾಯ/ಸ್ವೀಕೃತಿಯಾದ ಮೊಬಲಗು ಸಾರ್ವಜನಿಕ ಹಣವಾಗಿರುತ್ತದೆ. ಅದನ್ನು ವಸೂಲು ಮಾಡುವುದಕ್ಕೆ ಕಾನೂನು ಅನುಮತಿಸಿರತಕ್ಕದ್ದು. ಆದರೆ, ಸದರಿ ನಿರ್ಣಯದ 14ನೇ ಪ್ಯಾರಾಗ್ರಾಫ್‌ನಲ್ಲಿ ಅಪೆಕ್ಸ್ ನ್ಯಾಯಾಲಯ ಕಠಿಣ ಪರಿಸ್ಥಿತಿಯ ಹೊರತು ವಸೂಲಾತಿ ಮಾಡತಕ್ಕದ್ದೆಂದು ನಿರ್ಣಯಿಸಿರುತ್ತದೆ. ಇದೇ ಪ್ರಶ್ನೆಯು ಅಪೆಕ್ಸ್ ನ್ಯಾಯಾಲಯದ ಮೂರು ಮಾನ್ಯ ನ್ಯಾಯಮೂರ್ತಿಗಳ ಪೀಠದ ಮುಂದೆ ***ರಫೀಕ್ ಮಾಶಿ*** ಮೊಕದ್ದಮೆಯಲ್ಲಿ ಅಪೆಕ್ಸ್ ನ್ಯಾಯಾಲಯವು ಮತ್ತೆ ಈ ಪ್ರಶ್ನೆಯನ್ನು ಪರಿಗಣನೆಗೆ ತೆಗೆದುಕೊಂಡು ಅದು, ***ಚಾಂದಿ ಪ್ರಸಾದ್ ಯೂನಿಯಾಳ್*** ಮೊಕದ್ದಮೆಯಲ್ಲಿ ಮಾಡಿದ ಅಭಿಪ್ರಾಯೋಕ್ತಿಗಳ ನಿರ್ಣಯವು ಭಾರತ ಸಂವಿಧಾನದ 142ನೇ ಅನುಚ್ಛೇದದ ಅಡಿಯಲ್ಲಿ ಬರುವುದಿಲ್ಲ. ನಿರ್ಣಯವು 136ನೇ ಅನುಚ್ಛೇದದ ಅಡಿಯಲ್ಲಿ ಬರುತ್ತದೆ ಎಂದಿರುವುದು ಸಹ ಸರಿಯಾಗಿರುತ್ತದೆ. ಆದರೆ ಮುಂದುವರೆದು ಯಥಾರ್ಥ ನಿರ್ಣಯವನ್ನು ಇಬ್ಬರು ಸನ್ಮಾನ್ಯ ನ್ಯಾಯಮೂರ್ತಿಗಳಿಗೆ ಸಂಬಂಧಪಟ್ಟ ಈ ವಿಷಯದ ಅಂಶವನ್ನು ಉಲ್ಲೇಖಿಸಲಾಗಿರುತ್ತದೆ. ಮುಂದುವರೆದು, ಉಲ್ಲೇಖಿಸಿದ ವಸ್ತು ವಿಷಯಕ್ಕೆ ಉತ್ತರವನ್ನು ನೀಡದೆ ಯುಕ್ತ ವಿಲೇಗಾಗಿ ವಿಭಾಗೀಯ ಪೀಠಕ್ಕೆ ವಸ್ತು ವಿಷಯವನ್ನು ಹಿಂದಕ್ಕೆ ಕಳುಹಿಸಲಾಗಿರುತ್ತದೆ. ಆದುದರಿಂದಲೇ ಈ ವಸ್ತು ವಿಷಯವನ್ನು

ಅಪೆಕ್ಸ್ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ಮತ್ತೆ ಮಂಡಿಸಲಾಗಿದೆ ಮತ್ತು ಅಪೆಕ್ಸ್ ನ್ಯಾಯಾಲಯ ***ರಫೀಕ್ ಮಾಶಿ*** ಮೊಕದ್ದಮೆಯಲ್ಲಿ ಅದರ ನಿರ್ಣಯವನ್ನು (ಎರಡನೇ ನಿರ್ಣಯ) ಹೇಳಿದೆ ಮತ್ತು 18ನೇ ಪ್ಯಾರಾಗ್ರಾಫ್‌ನಲ್ಲಿ ದಾಖಲಿಸಿದ ಅಭಿಪ್ರಾಯೋಕ್ತಿಗಳು ಈ ಕೆಳಗಿನಂತಿದೆ:

> *18. ಉದ್ಯೋಗದಾತನು ತಪ್ಪು ಗ್ರಹಿಕೆಯಿಂದ ಮಾಡಿದ ಸಂದಾಯಗಳ ವಸೂಲಾತಿ ಮಾಡುವ ವಿಷಯದ ಮೇಲೆ ಸರ್ಕಾರಿ ನೌಕರರ ಎಲ್ಲ ಕಠಿಣತಮ ಪರಿಸ್ಥಿತಿಗಳಲ್ಲಿ ಅಪೇಕ್ಷಿಸುವುದು ಅವರ ಹಕ್ಕುಗಳ ಹೊರತು ನಿರೀಕ್ಷಿಸುವುದು ಸಾಧ್ಯವಿಲ್ಲ. ಈ ಮೇಲೆ ಉಲ್ಲೇಖಿಸಲಾದ ನಿರ್ಣಯಗಳಲ್ಲಿ ಆಧಾರದ ಮೇಲೆ ನಾವು ಕೆಲವೊಂದು ಸನ್ನಿವೇಶಗಳಲ್ಲಿ ಮಾತ್ರವೇ ಉದ್ಯೋಗದಾತರು ವಸೂಲಾತಿ ಮಾಡುವಾಗ ಸಿದ್ಧ ಉಲ್ಲೇಖಗಳನ್ನು, ಸಂಕ್ಷಿಪ್ತತೆಗಳನ್ನು ಅನುಸರಿಸಲು ಕಾನೂನಿನಲ್ಲಿ ಅನುಮತಿಸುವುದು ಸಾಧ್ಯವಿಲ್ಲ ಎಂದು ಹೇಳಬಹುದು ಅದು ಈ ಮುಂದಿನಂತಿದೆ:*
>
> *(i) ವರ್ಗ III ಮತ್ತು ವರ್ಗ IV ದ (ಅಥವಾ ಸಿ ಸಮೂಹ ಮತ್ತು ಡಿ ಸಮೂಹ ಸೇವೆ) ಸೇವೆಗಳಿಗೆ ಸೇರಿದ ನೌಕರರುಗಳಿಂದ ವಸೂಲಾತಿ.*
>
> *(ii) ನಿವೃತ್ತಿ ನೌಕರರಿಂದ ಅಥವಾ ವಸೂಲಾತಿ ಆದೇಶವಾದ ಒಂದು ವರ್ಷದೊಳಗಾಗಿ ಯುಕ್ತವಾಗಿ ನಿವೃತ್ತಿಯಾಗುವ ನೌಕರರಿಂದ ವಸೂಲಾತಿ.*

*(iii) ವಸೂಲಾತಿ ಆದೇಶ ಹೊರಡಿಸುವ ಮುಂಚಿತವಾಗಿ ಐದು ವರ್ಷಗಳು ಮೀರಿದ ಅವಧಿಗಾಗಿ ಹೆಚ್ಚಿನ ಸಂದಾಯವನ್ನು ನೌಕರರಿಂದ ವಸೂಲಾತಿ.*

*(iv) ಒಬ್ಬ ನೌಕರನು ಉನ್ನತ ಹುದ್ದೆಗೆ ಅಗತ್ಯಪಡಿಸಿದ ಕರ್ತವ್ಯಗಳನ್ನು ತಪ್ಪಾಗಿ ನಿರ್ವಹಿಸಿರುವ ಮೊಕದ್ದಮೆಗಳಲ್ಲಿ ವಸೂಲಾತಿಯನ್ನು ಮತ್ತು ಅದಕ್ಕನುಸಾರವಾಗಿ ನೌಕರನು ಸಂದಾಯ ಮಾಡಬೇಕಾಗುತ್ತದೆ ಹಾಗೂ ಅವನು ಕೆಳ ದರ್ಜೆಯ ಹುದ್ದೆಯಲ್ಲಿ ಅಗತ್ಯಪಡಿಸಿದ ಕೆಲಸವನ್ನು ಸಮರ್ಪಕವಾಗಿ ಮಾಡತಕ್ಕದ್ದು.*

*(v) ಯಾವುದೇ ಇತರ ಮೊಕದ್ದಮೆಯಲ್ಲಿ, ಅನ್ಯಾಯದ ಅಥವಾ ನಿರ್ದಯತೆ ಅಥವಾ ಸ್ವೇಚ್ಛಾನುಸಾರದಂಥ ಮಟ್ಟಿಗೆ ನೌಕರರಿಂದ ಬಾಕಿಯನ್ನು ವಸೂಲಿ ಮಾಡಲಾಗಿದೆಯೆಂಬ ನಿರ್ಣಯಕ್ಕೆ ನ್ಯಾಯಾಲಯವು ಬಂದಲ್ಲಿ, ನಿಯೋಜಕನ ವಸೂಲಿ ಮಾಡುವ ಹಕ್ಕು ನ್ಯಾಯ ಸಮ್ಮತವಾದ ಸಮತೋಲನವನ್ನು ಕಳೆದುಕೊಳ್ಳುತ್ತದೆ."*

8. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಅಪೆಕ್ಸ್ ನ್ಯಾಯಾಲಯವು ***ರಫೀಕ್ ಮಾಶಿ*** ಮೊಕದ್ದಮೆಯಲ್ಲಿ ಅದರ ತರುವಾಯದ ನಿರ್ಣಯದಲ್ಲಿ ಮಾಡಿದ ಅಭಿಪ್ರಾಯೋಕ್ತಿಗಳು ***ಚಾಂದಿ ಪ್ರಸಾದ್ ಯೂನಿಯಾಳ್*** ಮೊಕದ್ದಮೆಯಲ್ಲಿ ಅಪೆಕ್ಸ್ ನ್ಯಾಯಾಲಯ ಈ ಮೊದಲಿನ ನಿರ್ಣಯದಲ್ಲಿ ಮಾಡಿದ ಅಭಿಪ್ರಾಯೋಕ್ತಿಗಳನ್ನು ದುರ್ಬಲಗೊಳಿಸುವುದಿಲ್ಲ. ಇವನ್ನು ಎರಡು ಕಾರಣಗಳಿಗಾಗಿ ಸಮ್ಮತಿಸಲು

ಸಾಧ್ಯವಿಲ್ಲವೆಂದು ವಾದದಲ್ಲಿ ನಿವೇದಿಸಿರುವರು. ಒಂದು ***ಚಾಂದಿ ಪ್ರಸಾದ್ ಯೂನಿಯಾಳ್*** ಮೊಕದ್ದಮೆಯಲ್ಲಿ ಅಪೆಕ್ಸ್ ನ್ಯಾಯಾಲಯ ಕಠಿಣ ಪರಿಸ್ಥಿತಿಯ ಸಂದರ್ಭದಲ್ಲಿ ವಸೂಲಾತಿಯಿಂದ ವಿನಾಯಿತಿಗೊಳಿಸಬಹುದೆಂದು ನಿರ್ಣಯಿಸಿರುವ ಕಾರಣದಿಂದ ಇದನ್ನು ಸಮ್ಮತಿಸಲು ಸಾಧ್ಯವಿಲ್ಲ. ನಂತರದ ನಿರ್ಣಯದಲ್ಲಿ, ***ರಫೀಕ್ ಮಾಶಿ*** ಮೊಕದ್ದಮೆಯಲ್ಲಿ ಅಪೆಕ್ಸ್ ನ್ಯಾಯಾಲಯವು ಕಠಿಣ ಪರಿಸ್ಥಿತಿಯ ಮತ್ತು ವಿವಿಧ ಕಠಿಣ ಪರಿಸ್ಥಿತಿ/ಸಂದರ್ಭಗಳನ್ನು ವಿಸ್ತೃತವಾಗಿ ಪರಿಗಣಿಸಬೇಕಾಗುತ್ತದೆ ಎಂದು ತೀರ್ಮಾನಿಸಿರುವುದು ಕಾರಣದಿಂದಲೂ ಇದನ್ನು ಸಮ್ಮತಿಸಲು ಸಾಧ್ಯವಿಲ್ಲ. ನಿಸ್ಸಂದೇಹವಾಗಿ ಅವರಲ್ಲಿ ಕೆಲವರು ಮಾತ್ರವೇ ದೃಷ್ಟಾಂತವಾಗಿ ಇರುತ್ತಾರೆ ಮತ್ತು ವ್ಯಾಪಕವಾಗಿ ಇರುವುದಿಲ್ಲ. ಇಂತಹ ಸನ್ನಿವೇಶಗಳಲ್ಲಿ ***ಚಾಂದಿ ಪ್ರಸಾದ್ ಯೂನಿಯಾಳ್*** ಮೊಕದ್ದಮೆಯಲ್ಲಿ ಅಪೆಕ್ಸ್ ನ್ಯಾಯಾಲಯ ನಿರ್ದಿಷ್ಟವಾಗಿ 4ನೇ ಪ್ಯಾರಾಗ್ರಾಫ್‌ನಲ್ಲಿ ಮಾಡಿದ ಅಭಿಪ್ರಾಯೋಕ್ತಿಗಳನ್ನು ಭಾರತ ಸಂವಿಧಾನದ 136ನೇ ಅನುಚ್ಛೇದದ ಅಡಿಯಲ್ಲಿ ***ರಫೀಕ್ ಮಾಶಿ*** ಮೊಕದ್ದಮೆಯಲ್ಲಿ ಈಗಾಗಲೇ ಸಂದಾಯವಾಗಿರುವ ಮೊಬಲಗನ್ನು ವಸೂಲಿ ಮಾಡುವ ಕ್ರಮವನ್ನು ವಿವಿಧ ಕಠಿಣತಮ ಸನ್ನಿವೇಶಗಳಲ್ಲಿ ಹೊರಗಿಡಬೇಕೆಂಬ ಅಪೆಕ್ಸ್ ನ್ಯಾಯಾಲಯ ನಂತರ ನೀಡಿದ ನಿರ್ಣಯವನ್ನು ತೆಗೆದುಕೊಳ್ಳದೇ ನಿರ್ಣಯಿಸಿದಂತಹ ಸಂದರ್ಭಗಳ ಆಧಾರದ ಮೇಲೆ ಮಾತ್ರವೇ ಪ್ರಸ್ತುತ ವಸ್ತುವಿಷಯದ ವಾದಾಂಶವನ್ನು ಅಂಗೀಕರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ***ರಫೀಕ್ ಮಾಶಿ*** ಮೊಕದ್ದಮೆಯ ನಂತರದ ತೀರ್ಪು ಭಾರತ ಸಂವಿಧಾನದ 136ನೇ ಅನುಚ್ಛೇದದ ಅಡಿಯಲ್ಲಿ ಬರುವುದಿಲ್ಲವೆಂದು ಭಾರತದ ಸಂವಿಧಾನದ 136ನೇ ಅನುಚ್ಛೇದದ ಅಡಿಯಲ್ಲಿ ಮಾಡಿದ ಅನುಮತಿಯನ್ನು ಬಿಟ್ಟು ಬಿಡಬೇಕೆಂದು ಮೊದಲ ಕಂಡಿಕೆಯಲ್ಲಿ ವ್ಯತಿರಿಕ್ತ ನಿರ್ಣಯವನ್ನು ಪ್ರತಿಯಾಗಿ ದಾಖಲಿಸಿರುವರು.

9. ಪ್ರಸ್ತುತ ಮೊಕದ್ದಮೆಯನ್ನು ಮೇಲಿನ ಕಾನೂನು ಸ್ಥಾನವನ್ನು ಆಧರಿಸಿ ಪರಿಗಣಿಸುವ ಸಂಗತಿ ಸನ್ನಿವೇಶಗಳು ಇದ್ದರೆ ಮತ್ತು ನಿರ್ದಿಷ್ಟವಾಗಿ,

***ರಫೀಕ್ ಮಾಶಿ*** ಮೊಕದ್ದಮೆಯಲ್ಲಿ ನಂತರ ನಿರ್ಣಯದಲ್ಲಿ ಅಪೆಕ್ಸ್ ನ್ಯಾಯಾಲಯ 18ನೇ ಪ್ಯಾರಾಗ್ರಾಫ್‌ನಲ್ಲಿ ಮಾಡಿದ ಅಭಿಪ್ರಾಯೋಕ್ತಿಗಳನ್ನು ಇದರಲ್ಲಿ ಮತ್ತೆ ಯಥಾವತ್ತಾಗಿ ನಿರೂಪಿಸಲಾಗಿದೆ, ನಮಗೆ ಪ್ರಸ್ತುತ ಮೊಕದ್ದಮೆಯಲ್ಲಿನ ಸನ್ನಿವೇಶಗಳು (i)ನೇ ಮತ್ತು (iii)ನೇ ಖಂಡ (v)ನೇ ಖಂಡದ ಜೊತೆಯಲ್ಲಿ ಮೇಲಿನ ನಿರ್ಣಯವು ಒಳಗೊಳ್ಳುತ್ತದೆ ಎಂಬುದು ಕಂಡುಬರುತ್ತದೆ. ನಾವು ಈಗಾಗಲೇ ದಾಖಲಿಸಿರುವಂತೆ ಪ್ರಸ್ತುತ ಮೊಕದ್ದಮೆಯ ಎಲ್ಲ ನೌಕರರು (iii)ನೇ ವರ್ಗದ ಸೇವೆಗೆ ಸೇರಿರುತ್ತಾರೆ. ಆದುದರಿಂದ ಉನ್ನತ ದರ್ಜೆಯಲ್ಲಿರುವ ಇಬ್ಬರು ವ್ಯಕ್ತಿಗಳನ್ನು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ ಅವರನ್ನು ಹೊರತುಪಡಿಸಿ ಎಲ್ಲಾ ನೌಕರರು (iii) ಮತ್ತು (iv)ನೇ ಖಂಡಕ್ಕೆ ಒಳಪಡುತ್ತಾರೆ. ಆದುದರಿಂದ 18ನೇ ಪ್ಯಾರಾಗ್ರಾಫ್‌ನಲ್ಲಿ ನಿರ್ಣಯದಲ್ಲಿ ಅಗತ್ಯಪಡಿಸಿದ ಮೇಲಿನ (ii)ನೇ ಖಂಡದಡಿಯಲ್ಲಿ ಎಲ್ಲಾ ನೌಕರರು ಒಳಗೊಳ್ಳುವರು ಎಂದು ನ್ಯಾಯವಾದಿಗಳು ತಮ್ಮ ವಾದವನ್ನು ಮಂಡಿಸಿರುವರು.

10. ನ್ಯಾಯಾಧಿಕರಣದಿಂದ ಹೊರಡಿಸಲಾದ ಆದೇಶದಿಂದ ಉದ್ಭವಿಸಿದ ಭಾರತ ಸಂವಿಧಾನದ 227ನೇ ಅನುಚ್ಛೇದ ಅಡಿಯಲ್ಲಿ ಈ ನ್ಯಾಯಾಲಯದ ಅಧಿಕಾರವು ನ್ಯಾಯಿಕ ಪರಿಶೀಲನೆಯ ಪರಿಮಿತ ವ್ಯಾಪ್ತಿಯನ್ನು ಹೊಂದಿರುತ್ತದೆಂದು ಇಲ್ಲಿ ಕಠಿಣವಾಗಿ ಹೇಳಲೇಬೇಕಾಗಿದೆ. ದಾಖಲೆ ಮೇಲೆ ತಪ್ಪುಗಳು ಕಂಡುಬಂದರೆ ಅಥವಾ ಗಂಭೀರವಾದ ಅನ್ಯಾಯವು ಕಂಡು ಬಂದರೆ ಅಥವಾ ಶಾಸನಾತ್ಮಕ ಉಪಬಂಧವು ಉಲ್ಲಂಘನೆಯಾಗಿರುವುದು ಕಂಡು ಬಂದರೆ ಮಾತ್ರವೇ ಸಂವಿಧಾನದ 227ನೇ ಅನುಚ್ಛೇದದ ಅಡಿಯಲ್ಲಿನ ಅಧಿಕಾರ ವ್ಯಾಪ್ತಿಯೊಳಗೆ ಹಸ್ತಕ್ಷೇಪವನ್ನು ಚಲಾಯಿಸುವುದಕ್ಕಾಗಿ ಈ ನ್ಯಾಯಾಲಯ ಕೇಳಬಹುದು. ನ್ಯಾಯಾಧಿಕರಣವು ವಸೂಲಾತಿಗೆ ಅವಕಾಶವಿಲ್ಲವೆಂದು ನಿರ್ಣಯಿಸಿರುವುದರಿಂದ ಮತ್ತು ನನ್ನ ದೃಷ್ಟಿಯಲ್ಲಿ ಮೇಲಿನ ಕಾನೂನು ಸ್ಥಾನದಲ್ಲಿ ಅದನ್ನು ಪರಿಗಣಿಸಿರುವಾಗ ಅಂಥ ನಿರ್ಣಯವು ತಪ್ಪಾಗಿರುವುದಿಲ್ಲ. ಸಂವಿಧಾನದ 227ನೇ ಅನುಬಂಧದ ಅಡಿಯಲ್ಲಿ ಮೊಕದ್ದಮೆಯಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಾಗುವುದಿಲ್ಲ.

11. ಮೇಲಿನ ದೃಷ್ಟಿಕೋನದಲ್ಲಿ ನಮಗೆ ನ್ಯಾಯಾಧಿಕರಣದ ನಿರ್ಣಯದಲ್ಲಿ ಹಸ್ತಕ್ಷೇಪ ಮಾಡುವ ಯಾವುದೇ ಸಂದರ್ಭವು ಇಲ್ಲಿ ಕಂಡು ಬರುತ್ತಿಲ್ಲ. ಹಾಗಾಗಿ, ಅರ್ಜಿಯು ಗುಣಾರ್ಹತೆಯನ್ನು ಹೊಂದಿಲ್ಲ. ಆದ್ದರಿಂದ ಅರ್ಜಿಯನ್ನು ವಜಾ ಮಾಡಲಾಗಿದೆ.

---